ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: [illegible] ದಿನಾಂಕ : DATE : [illegible]

ರಾಜೀನಾಮೆಯೋ ಮತ್ತಿನ್ನೇನೋ ಕಾದುನೋಡಿ

ಸಭಾಪತಿ ಕೆ.ಪ್ರತಾಪಚಂದ್ರಶೆಟ್ಟಿ ನಿಗೂಢ ಹೇಳಿಕೆ : ಸದನದಲ್ಲೇ ವರದಿ ಮಂಡನೆ

ಬೆಂಗಳೂರು: 'ಹೊರಗಿನ ಚರ್ಚೆ, ಅಭಿಪ್ರಾಯಗಳು ನನಗೇನೂ ಗೊತ್ತಿಲ್ಲ. ರಾಜೀನಾಮೆ ಚಿಂತನೆಯೋ ಮತ್ತ ಇನ್ನೇನೋ [illegible] ಕಾದು ನೋಡಿ' ಎಂದು ಸಭಾಪತಿ ಕೆ. ಪ್ರತಾಪಚಂದ್ರಶೆಟ್ಟಿ ನಿಗೂಢವಾಗಿ ಹೇಳಿದರು. [illegible] ಘಟನೆಯಲ್ಲಿ ಮರಿತಿಬ್ಬೇಗೌಡ ಅಧ್ಯಕ್ಷತೆಯ ಸದನ ಸಮಿತಿ [illegible] ಸಲ್ಲಿಸಿದ ಮಧ್ಯಂತರ ವರದಿ ಸ್ವೀಕರಿಸಿದ ಬಳಿಕ ಪತ್ರಕರ್ತರ ಪ್ರಶ್ನೆಗೆ [illegible] ಅವರು. ನಿಯಮಗಳ ಪ್ರಕಾರ ಉಪ ಸಭಾಪತಿಗೆ ರಾಜೀನಾಮೆ ಸಲ್ಲಿಸಬೇಕು. [illegible] ಎಂದು [illegible] (ಪತ್ರಕರ್ತರು) [illegible] ಆ ಬಗ್ಗೆ ಏನನ್ನಾದರೂ ಹೇಳಲು ಸಾಧ್ಯ ಎಂದರು.

ಬಾಕಿ ಉಳಿದ ವರದಿ: ವಿಧಾನಪರಿಷತ್‌ನ ಡಿ.15ರ ಅಧಿವೇಶನದ ವೇಳೆ ನಡೆದ ಕಹಿ ಘಟನೆಯ ವಿಚಾರಣೆ ನಡೆಸಿ ವರದಿ ಸಲ್ಲಿಸಲೆಂದು ಮರಿತಿಬ್ಬೇಗೌಡ ಅಧ್ಯಕ್ಷತೆಯಲ್ಲಿ ಐದು ಸದಸ್ಯರುಳ್ಳ ಸದನ ಸಮಿತಿಯನ್ನು ಸರ್ಕಾರ ರಚಿಸಿ ಆದೇಶ ಹೊರಡಿಸಿತ್ತು. ಈ ಪೈಕಿ ಎಚ್.ವಿಶ್ವನಾಥ್ ಹಾಗೂ ಎಸ್.ವಿ.ಸಂಕನೂರು ಖಾಸಗಿ ಕಾರಣಗಳಿಂದ ಸಮಿತಿ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದು, ಸದ್ಯಕ್ಕೆ ಮೂವರು ಸದಸ್ಯರಿದ್ದಾರೆ. [illegible] ಸದನದಲ್ಲಿ ಮಂಡಿಸುವೆ. ವರದಿಯಲ್ಲಿನ ಅಂಶಗಳನ್ನು ಪರಿಶೀಲಿಸಿ ಬಳಿಕ ಮುಂದೇನು ಮಾಡಬೇಕು ಎಂದು ನಿರ್ಧರಿಸುವೆ ಎಂದು ಪ್ರತಾಪಚಂದ್ರಶೆಟ್ಟಿ ತಿಳಿಸಿದರು.

ಸಭಾಪತಿ ಕೆ.ಪ್ರತಾಪಚಂದ್ರಶೆಟ್ಟಿಗೆ ಮರಿತಿಬ್ಬೇಗೌಡ ಅಧ್ಯಕ್ಷತೆಯ ಸದನ ಸಮಿತಿ ಮಧ್ಯಂತರ ವರದಿ ಸಲ್ಲಿಸಿತು. ಸಮಿತಿ ಸದಸ್ಯರಾದ ಪಿ.ಕೆ.[illegible], ಅರ್.ಬಿ.ತಿಮ್ಮಾಪುರ ಇದ್ದರು.

ಕ್ರಮಕ್ಕೆ ಶಿಫಾರಸು

ಗಲಾಟೆಗೆ ಕಾರಣಕರ್ತರಾದ ವಿವಿಧ ಪಕ್ಷಗಳ ಸದಸ್ಯರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಶಿಫಾರಸು ಮಾಡಲಾಗಿದೆ. ಡಿಸಿಎಂ ಅಶ್ವತ್ಥನಾರಾಯಣ, ಸಚಿವ ಮಾಧುಸ್ವಾಮಿ ಬಗ್ಗೆಯೂ ವರದಿಯಲ್ಲಿ ಪ್ರಸ್ತಾಪ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

84 ಪುಟಗಳ ಮಧ್ಯಂತರ ವರದಿ ಸಲ್ಲಿಕೆ

ಡಿಸೆಂಬರ್ ಅಧಿವೇಶನದಲ್ಲಿ ನಡೆದ ಕಹಿ ಘಟನೆ ಸಂಬಂಧ 2 ಸಿಡಿಗಳ ರೂಪದಲ್ಲಿ ಸಾಕ್ಷ್ಯಾಧಾರಗಳನ್ನು ಒಳಗೊಂಡ 84 ಪುಟಗಳ ಮಧ್ಯಂತರ ವರದಿಯನ್ನು ಸಭಾಪತಿಯವರಿಗೆ ಸಲ್ಲಿಸಲಾಗಿದೆ. ವರದಿ ಸಲ್ಲಿಸುವುದಕ್ಕೆ ಸಮಿತಿಗೆ 20 ದಿನಗಳ ಕಾಲಾವಕಾಶ ನೀಡಲಾಗಿತ್ತು. ಸಮಿತಿ ಒಟ್ಟು 5 ಸಭೆಗಳನ್ನು ನಡೆಸಿದ್ದು, ಸಂಪೂರ್ಣ ಅಂತಿಮ ವರದಿ ಸಲ್ಲಿಸಲು ಹೆಚ್ಚಿನ ಸಮಯಾವಕಾಶ ಅಗತ್ಯವಿದೆ. ಹೀಗಾಗಿ ಮೊದಲ 4 ಸಭೆಗಳಲ್ಲಿ ಸಂಗ್ರಹಿಸಿದ ಮಾಹಿತಿ ಮಧ್ಯಂತರ ವರದಿಯಲ್ಲಿದೆ ಎಂದು ಸದನ ಸಮಿತಿ ಅಧ್ಯಕ್ಷ ಮರಿತಿಬ್ಬೇಗೌಡ ಸುದ್ದಿಗಾರರಿಗೆ ತಿಳಿಸಿದರು.